ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 8 ಸಂ. 5 ಮೇ 2011 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆಯವರ ಸಂಚಲನವನ್ನು ಸಾವಿರಾರು ಜನ ಬೆಂಬಲಿಸಿದರು. ಎಲ್ಲ ವ್ಯವಸ್ಥೆಗಳಿಗೂ ಪ್ರವಿಸಿರುವ ಭ್ರಷ್ಟಾಚಾರದಿಂದ ಪ್ರತಿಯೊಬ್ಬರೂ ರೋಸಿಹೋಗಿದ್ದಾರೆ. ಅಲ್ಲದೆ ಪ್ರತಿಯೊಬ್ಬರೂ ಅಸಹಾಯಕರಾಗಿದ್ದಾರೆ. ಅಣ್ಣಾ ಹಜಾರೆಯವರು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ ಮೇಲೆ ಸಾವಿರಾರು ಜನರು ತಮ್ಮಲ್ಲಿ ಅದುಮಿಟ್ಟಿದ್ದ ಕೋಪವನ್ನು ತೋರ್ಪಡಿಸಿದರು ಮತ್ತು ಪ್ರತಿಯೊಬ್ಬರೂ ಮೌನ ಸಮ್ಮತಿಯಿಂದ ಅವರ ಜೊತೆಗೂಡಿದರು. ಇದು ಭ್ರಷ್ಟಾಚಾರದ ವಿರುದ್ಧ ಹೋರಾಟದ ಆರಂಭ ಎಂದು ಅಣ್ಣಾ ಹೇಳಿದರು. ಅವರು ಈ ಹೋರಾಟವನ್ನು ಬಿಡಬಾರದು. ಮುಖ್ಯವಾಗಿ, ಅವರ ಕಾರ್ಯಕ್ರಮವನ್ನು ಬೇರೆಡೆ ತಿರುಗಿಸಲು ಅಥವಾ ಅಪಹರಿಸಲು ಕಾಯುತ್ತಿರುವ ಸಮಯಸಾಧಕರಿಗೆ ಅವಕಾಶ ಕೊಡಬಾರದು.

ಈ ಸಂಚಲನದ ಹಿಂದೆ ಲಕ್ಷಾಂತರ ಜನ ಚಾನಲ್ ಮಾಡಿರುವ ಚೈತನ್ಯಗಳಿವೆ. ಋಷಿಗಳು ಮೇಲಿನ ಲೋಕಗಳಿಂದ ಕೆಳತಂದಿರುವ ಚೈತನ್ಯಗಳಿವೆ. ಹತ್ತಿರವಾಗುತ್ತಿರುವ ಹೊಸಯುಗದ ಚೈತನ್ಯಗಳು ಕೂಡ ಇವೆ. ಮಧ್ಯ-ಪ್ರಾಚ್ಯ ದೇಶಗಳಲ್ಲಿ ಶೋಷಣೆಯ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳ ಹಿಂದೆ ಈ ಚೈತನ್ಯಗಳಿವೆ. ದೊಡ್ಡ ಬದಲಾವಣೆಗಳಿಗೆ ಕಾಲ ಬಂದಿದೆ. ಭ್ರಷ್ಟ ವ್ಯವಸ್ಥೆಗಳು ಕುಸಿಯಲು ಆರಂಭಿಸುವ ಕಾಲ ಬಂದಿದೆ. ಇವು, 2012ರಲ್ಲಿ ಸಂಭವಿಸುವ ಬದಲಾವಣೆಗಳಿಗೆ ಸೂಚಕಗಳು. 2012ರಲ್ಲಿ ಪ್ರಪಂಚ ಕೊನೆಗೊಳ್ಳುವುದಿಲ್ಲ. ಆದರೆ ಭ್ರಷ್ಟ ವ್ಯವಸ್ಥೆಗಳು ಕೊನೆಗೊಳ್ಳಲು ಆರಂಭಿಸುತ್ತವೆ.

ಎಲ್ಲ ಧ್ಯಾನಿಗಳು ಹೆಚ್ಚು ಧ್ಯಾನ ಮಾಡುವ, ಲೈಟ್‌ಚಾನಲ್‌ಗಳು ಹೆಚ್ಚು ಬೆಳಕನ್ನು ಚಾನಲ್ ಮಾಡುವ ಕಾಲ ಇದು. ಪ್ರಪಂಚದ ಎಲ್ಲ ಪ್ರಜೆಗಳು, ಎಲ್ಲ ರೀತಿಯ ಭ್ರಷ್ಟಾಚಾರ, ಹಿಂಸಾಚಾರ ಮತ್ತು ಅ-ಪ್ರೀತಿಗಳನ್ನು ತಿರಸ್ಕರಿಸಿ, ನ್ಯಾಯ, ಶಾಂತಿ ಮತ್ತು ಪ್ರೀತಿಗಳನ್ನು ವಿಶ್ವದ ಬುದ್ಧಿಶಕ್ತಿಯಿಂದ ಕೋರುವ ಕಾಲ ಇದು. ಸಾಮೂಹಿಕ ಯೋಚನಾಬಲಕ್ಕೆ ಅಗಾಧವಾದ ಶಕ್ತಿಯಿದೆ. ಅದು ಭವಿಷ್ಯಗಳನ್ನು ಬದಲಿಸುತ್ತದೆ ಮತ್ತು ಹೊಸ ಭವಿಷ್ಯಗಳನ್ನು ಸೃಷ್ಟಿಸುತ್ತದೆ. ನಮ್ಮೆಲ್ಲರಿಗೂ 2012ರ ನಂತರದ ಭವಿಷ್ಯಗಳನ್ನು ಸೃಷ್ಟಿಸುವುದಕ್ಕೆ ಇದು ಸರಿಯಾದ ಸಮಯ.

ಜನರು ತಮ್ಮ ಸಮಸ್ಯೆಗಳನ್ನು ನನ್ನ ಹತ್ತಿರ ತರುತ್ತಾರೆ. ಅವನ್ನು ಆಧ್ಯಾತ್ಮಿಕವಾಗಿ ನಿವಾರಿಸಿಕೊಳ್ಳುವ ಮಾರ್ಗಗಳನ್ನು ಸೂಚಿಸುತ್ತೇನೆ. ಜನರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡು, ತಮ್ಮ ಆಧ್ಯಾತ್ಮಿಕ ಪಯಣಗಳನ್ನು ಮುಂದುವರಿಸುತ್ತಾರೆ. ಜನರು ಪುನಃ ಮುಗುಳ್ನಗಲು ಪ್ರಾರಂಭಿಸಿದಾಗ ನನಗೆ ಸಂತೋಷವಾಗುತ್ತದೆ. ಪ್ರತಿಯೊಂದು ಮುಗುಳ್ನಗೆಯೂ ಒಂದು ಹೂಬಿಸಿಲಿನಂತೆ.

ಜನರು ಬೇರೆಯವರ ಸಮಸ್ಯೆಗಳನ್ನೂ ಕೂಡ ಪರಿಹಾರಕ್ಕಾಗಿ ನನ್ನ ಹತ್ತಿರ ತರುತ್ತಾರೆ. ಅಂಥ ಸಮಯಗಳಲ್ಲಿ, ಸಮಸ್ಯೆಗಳಿರುವವರು ಧ್ಯಾನ ಮಾಡಲು ಪ್ರಾರಂಭಿಸಬೇಕು, ಮತ್ತು ತಾವಾಗಿಯೇ ಆಧ್ಯಾತ್ಮಿಕವಾಗಿ ಉತ್ತರಗಳನ್ನು ಕಂಡುಕೊಳ್ಳುವ ಮಾರ್ಗಗಳನ್ನು ಅನುಸರಿಸಬೇಕು ಎಂದು ವಿವರಿಸುವುದಕ್ಕೆ ನಾನು ಪ್ರಯಾಸಪಡುತ್ತೇನೆ. ಅವರಿಗಾಗಿ ಇತರರು ಪ್ರಾರ್ಥನೆ ಮಾತ್ರ ಮಾಡಬಹುದು. ಜನರು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳದಿರುವುದು ಮತ್ತು ಒಪ್ಪಿಕೊಳ್ಳದಿರುವುದು ಈ ವಿಷಯಗಳನ್ನು. ಅವರು ಪವಾಡಗಳನ್ನು ಬಯಸುತ್ತಾರೆ. ಆದರೆ ನಾವು ಬೇಡಿದ ರೀತಿಯಲ್ಲಿ ಪವಾಡಗಳು ಆಗುವುದಿಲ್ಲ. ಆಗ ಅವರು ಯಾವುದಕ್ಕಾದರೂ ಮತ್ತು ಎಲ್ಲದಕ್ಕೂ ಭರವಸೆ ನೀಡುವ ಜ್ಯೋತಿಷಿಗಳು ಮತ್ತು ತಾಂತ್ರಿಕರ ಹತ್ತಿರ ಹೋಗುತ್ತಾರೆ. ಅದಕ್ಕಾಗಿ ಅವರು ಹಣ ಖರ್ಚು ಮಾಡುತ್ತಾರೆ, ಮತ್ತು ಅನೇಕ ಬಾರಿ, ಅವರ ಸಮಸ್ಯೆಗಳು ಹಾಗೆಯೇ ಉಳಿದಿದ್ದು, ಅವರು ದುಃಖಿತರಾಗಿಯೇ ಉಳಿಯುತ್ತಾರೆ.

ಅವರನ್ನು ನೋಡಿ ನನಗೆ ವ್ಯಸನವಾಗುತ್ತದೆ ಮತ್ತು ನಾನು ಅವರಿಗಾಗಿ ಪ್ರಾರ್ಥಿಸುತ್ತೇನೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)


**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**1-2-2011 ರಂದು ತೆಗೆದ ತಪೋವನದ ಫೋಟೋದಲ್ಲಿ ಇರುವ ಅನೇಕ ಆರ್ಬ್(ಬೆಳಕಿನ ಗೋಳ)ಗಳು ಸೂಕ್ಷ್ಮ ಶರೀರಿಗಳ ಉಪಸ್ಥಿತಿಯನ್ನು ಸೂಚಿಸುತ್ತವೆ**

## ಸುದ್ದಿ-ಸೂಚನೆ

- 16-4-2011ರಂದು ತಪೋನಗರದಲ್ಲಿ ನಡೆದ ಓರಿಯಂಟೇಶನ್ ತರಗತಿಯಲ್ಲಿ 250ಕ್ಕೂ ಹೆಚ್ಚು ಸಾಧಕರು ತಪೋನಗರದಲ್ಲಿ ಮತ್ತು ದೂರಕಲಿಕೆಯ ಸಾಧಕರು ವೆಬ್‌ಕಾಸ್ಟ್ ಮೂಲಕ ಭಾಗವಹಿಸಿದ್ದರು.
- 25-4-2011ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದ ಮೂರನೇ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು
- 18-5-2011ರಂದು ಗುರೂಜಿಯವರ ಹುಟ್ಟುಹಬ್ಬ ವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಮಧ್ಯಾಹ್ನ 12 ಘಂಟೆಗೆ ಆಚರಿಸಲಾಗುವುದು.
- 22-5-2011ರಂದು ತಪೋನಗರದಲ್ಲಿ ಗುರೂಜಿ ಯವರ ಹುಟ್ಟುಹಬ್ಬವನ್ನು ಆಚರಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧಕರು ದಿನಾಂಕ 19-5-2011ರೊಳಗೆ ತಮ್ಮ ಹೆಸರನ್ನು ನೋಂದಾಯಿಸಬೇಕು.
- ತಪೋನಗರದಲ್ಲಿ 22-5-2011 ರಂದು ನಡೆಯುವ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಶ್ರೀಮತಿ ಪೂರ್ಣಿಮಾ ಪರುಳೇಕರ್‌ರವರು ಮರಾಠಿಗೆ ಮತ್ತು ಶ್ರೀಮತಿ ಚಂಪಾರವರು ಕನ್ನಡಕ್ಕೆ ಅನುವಾದಿಸಿದ "Preparing for 2012" ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು.
- ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಅವರ ಬ್ಲಾಗ್-ಅನ್ನು ಓದಲು ಮತ್ತು ಅವರ ವೀಡಿಯೋ ಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 08-05-11 | ಶಂಬಲಗ್ರೂಪ್ ಮಧ್ಯಾಹ್ನ 2 ಘಂಟೆಗೆ ಸಂಧಿಸುತ್ತದೆ |
| 15-05-11 | 'ರಾ' ಗ್ರೂಪ್ ಮಧ್ಯಾಹ್ನ 2 ಘಂಟೆಗೆ ಸಂಧಿಸುತ್ತದೆ |
| 17-05-11 | ಬುದ್ಧ ಪೂರ್ಣಿಮಾ<br>ವಿಶೇಷ ಧ್ಯಾನ: ಮಧ್ಯಾಹ್ನ 12-1 |
| 29-05-11 | ಅಖಂಡ ಧ್ಯಾನ: ಮಧ್ಯಾಹ್ನ 10-1 |

## ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 06-03-11 | ದುರ್ಗಾನಂದ ಜಿ.ಕೆ. |
| 13-03-11 | ರಮೇಶ್ ಭೋಸೆಕರ್ ಮತ್ತು ಸುಧಾ ರವಿ |
| 20-03-11 | ವಿಜಯ್ ಕುಮಾರ್ ಮತ್ತು ಚನ್ನಬಸಪ್ಪ |
| 27-03-11 | ವಿಜಯ್ ಕೆ. ಸೊಮನ್ ಮತ್ತು ನಾಗಮ್ಮ ಎ. |

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಭಾನು | ಮಾಸ ಶಿವರಾತ್ರಿ |
| 03 | ಮಂಗಳ | ಅಮಾವಾಸ್ಯೆ |
| 06 | ಶುಕ್ರ | ಅಕ್ಷಯ ತೃತೀಯ |
| 17 | ಮಂಗಳ | ಬುದ್ಧ ಪೂರ್ಣಿಮಾ |
| 18 | ಬುಧ | ಗುರೂಜಿಯವರ ಹುಟ್ಟುಹಬ್ಬ<br>ಬೆಳಕಿನ ವಿಶ್ವಸಂಚಲನದ<br>3ನೇ ವಾರ್ಷಿಕೋತ್ಸವ |
| 22 | ಭಾನು | ಗುರೂಜಿಯವರ ಹುಟ್ಟುಹಬ್ಬ ಆಚರಣೆ |
| 25 | ಬುಧ | ಕೃಷ್ಣಾಷ್ಟಮಿ |
| 31 | ಮಂಗಳ | ಮಾಸ ಶಿವರಾತ್ರಿ |

## ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮ ಭಾನುವಾರ, 22-5-2011

ಬೆಳಿಗ್ಗೆ 11 ಕ್ಕೆ ಸ್ವಾಗತ ಭಾಷಣ
ಭಾಷಣಗಳು
ಗುರೂಜಿಯವರ ನುಡಿಗಳು
ಪುಸ್ತಕ ಬಿಡುಗಡೆ
ವಿಶೇಷ ಧ್ಯಾನ
ಗುರೂಜಿಯವರಿಂದ ಆಶೀರ್ವಾದ
ಮಧ್ಯಾಹ್ನ 12.30ಕ್ಕೆ ಪ್ರಸಾದ

14-05-2011ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಮಾಸ್ಟರ್ ಗುರೂಜಿ

**ಶ್ಯಾಮಲಾದೇವಿ**

ಆಗಷ್ಟೇ ಅಮರರೊಂದಿಗೆ ಕೆಲಸ ಮಾಡಲು ಸೇರಿದ್ದ ಗುರೂಜಿಯವರನ್ನು ಒಂದು ಸಂಜೆ ವಿಹಾರಕ್ಕೆ ಕರೆದೊಯ್ದು, ಮನೋವತಿಯ ವಿಹಂಗವು ನೋಟದತ್ತ ಬೆರಳುಮಾಡಿ ತೋರಿಸುತ್ತಾ, ಅಮರರು ಗುರೂಜಿಯವರೊಂದಿಗೆ ಹೇಳಿದರು, "ನಾನು ಇಲ್ಲಿ ಒಂದು ಸ್ವರ್ಗವನ್ನು ಕಾಣಬಯಸುತ್ತೇನೆ." ಆ ಮಾತುಗಳನ್ನು ತಮ್ಮ ಹೃದಯದಲ್ಲಿ ಅಚ್ಚೊತ್ತಿಕೊಂಡು, ಅಮರರ ಕನಸನ್ನು ತಮ್ಮ ಜೀವನದ ಧ್ಯೇಯವಾಗಿ ಮಾಡಿಕೊಂಡರು. 1993ರಲ್ಲಿ ಎಲ್ಲ ಮಟ್ಟಗಳಲ್ಲಿ ಕೆಲಸ ಪ್ರಾರಂಭವಾಯಿತು.

ತಪೋನಗರದಲ್ಲಿ ಮಾನಸಿವಲಯ ನಿರ್ಮಾಣ ಮತ್ತು ಮಹಾಕುಂಡಲಿನಿ ಚೈತನ್ಯಗಳನ್ನು ಸ್ಥಾಪಿಸುವುದರೊಂದಿಗೆ ಗುರೂಜಿಯವರು ಕೆಲಸಕ್ಕೆ ಭದ್ರ ಬುನಾದಿಯನ್ನು ಹಾಕಿದರು. ಜೊತೆಜೊತೆಗೆ ತಪೋನಗರವನ್ನು ಎರಡನೇ ಶಂಬಲವಾಗಿ ಬೆಳೆಸುವ ಮತ್ತು ಋಷಿಮಾರ್ಗದ ಧ್ಯಾನಯೋಗ ವನ್ನು ಕ್ರಮಬದ್ಧಗೊಳಿಸುವ ಕಾರ್ಯಗಳನ್ನೂ ಕೈಗೆತ್ತಿಕೊಂಡರು. ಗುರೂಜಿಯವರು, ಅವಿರತವಾಗಿ ಅನೇಕ ಮಟ್ಟಗಳಲ್ಲಿ ಕೆಲಸ ಮಾಡಿ, ಋಷಿತ್ವದ ಅನೇಕ ಹಂತಗಳನ್ನು ದಾಟಿ, ಇಂದು ಒಬ್ಬ ಬೆಳಕಿನ ಮಾಸ್ಟರ್ ಮಟ್ಟಕ್ಕೇರಿದ್ದಾರೆ.

ಮಾನಸ ಮತ್ತು ಅಂತರ್–ಮಾನಸಗಳು ಅವರ ಎರಡು ಕಣ್ಣುಗಳಂತೆ. ಅಧ್ಯಯನ ಕೇಂದ್ರ, ಗುರೂಜಿಯವರ ಕೆಲಸಗಳಲ್ಲೆಲ್ಲಾ ಕಲಶಪ್ರಾಯ ವಾದುದು. ಎರಡು ವರ್ಷಗಳ ಹಿಂದೆ ಅಂತರ್–ವನದಲ್ಲಿ ಗ್ರೇಟ್–ರಾ ಚೈತನ್ಯಗಳ ಅವತರಣವಾಗಿ 'ರಾ' ಧ್ಯಾನಮಂದಿರದಡಿ ಸ್ಥಾಪಿತವಾಗಿರುವ ಈ ಚೈತನ್ಯಗಳು, ರಾ–ಬ್ರಹ್ಮ ಮತ್ತು ವಿಶ್ವದ ಗ್ರೇಟ್ ಮಾಸ್ಟರ್‌ಗಳು ಗುರೂಜಿಯವರ ಉನ್ನತ ಸಾಧನೆಗಳನ್ನು ಗುರುತಿಸಿ, ಅವರ 70ನೇ ಹುಟ್ಟುಹಬ್ಬಕ್ಕೆ ನೀಡಿದ ಪ್ರೀತಿಯ ಉಡುಗೊರೆ. ಗ್ರೇಟ್–ರಾ ಚೈತನ್ಯಗಳ ಉಪಸ್ಥಿತಿಯಿಂದ ಈ ಸ್ಥಳ, ಪ್ರಪಂಚದ ಆಧ್ಯಾತ್ಮಿಕ ಕೇಂದ್ರವಾಗಿದೆ.

ಬೆಳಕಿನ ಮಾಸ್ಟರ್ ಗುರೂಜಿಯವರು 2008ರಲ್ಲಿ ಬೆಳಕಿನ ವಿಶ್ವಸಂಚಲನವನ್ನು ಪ್ರಾರಂಭಿಸಿದರು. ಈ ಸಂಚಲನ ಮೌನವಾಗಿ ಇಡೀ ಪ್ರಪಂಚಕ್ಕೆ ಹರಡುತ್ತಿದೆ. ಕೆಲಸ ಬೆಳೆಯುತ್ತಿದೆ ಮತ್ತು ಗುರೂಜಿಯವರು ಪ್ರಪಂಚದಾದ್ಯಂತ ವಿಸ್ತರಿಸುತ್ತಿದ್ದಾರೆ. ಈಗಿನ ಕಷ್ಟಕರ ಮತ್ತು ದಿಕ್ಕುತೋಚದ ಸಮಯಗಳಲ್ಲಿ, ಪ್ರಪಂಚದ ಭರವಸೆಯಾಗಿರುವ ಬೆಳಕನ್ನು ಗುರೂಜಿಯವರು ಇಡೀ ಪ್ರಪಂಚಕ್ಕೆ ಕೊಂಡೊಯ್ಯುತ್ತಿದ್ದಾರೆ. ■

## ಗುರೂಜಿ

**ವೈಶಾಲಿ ಜೋಶಿ; ಅನು: ಪಾಂಡುರಂಗ**

ಅಮರರು ಗುರೂಜಿಯವರಿಗೆ ಮನೋವತಿ ಮನೆಯ ಕೀಲಿಕೈ ಕೊಟ್ಟಾಗ, ಕಾಲ ಕಳೆದಂತೆ ಹಂತಹಂತವಾಗಿ ತೆರೆದುಕೊಳ್ಳಲಿರುವ ದೈವೀ ಯೋಜನೆಗೆ ಅದು ಸಾಂಕೇತಿಕ ಕೀಲಿಕೈ ಆಗಿತ್ತು. ತಮ್ಮ ಗುರುವಿನ ಬಗ್ಗೆ ಮತ್ತು ಋಷಿಗಳ ಬಗ್ಗೆ ಷರತ್ತಿಲ್ಲದ ಭಕ್ತಿ ಮತ್ತು ಗೌರವಾದರಗಳನ್ನು ಹೊಂದಿರುವ ಗುರೂಜಿಯವರು, ದೈವೀ ಇಚ್ಛೆಗೆ ತಲೆಬಾಗಿ ಪ್ರಾಮಾಣಿಕತೆ, ವಿಧೇಯತೆ, ನಿಷ್ಠೆ ಮತ್ತು ನಮ್ರತೆಯಿಂದ ಈ ಆಧ್ಯಾತ್ಮಿಕ ಗುರಿಸಾಧನೆಗಾಗಿ ತಮ್ಮ ಇಡೀ ಜೀವನವನ್ನು ತೊಡಗಿಸಿಕೊಂಡರು.

ಗುರೂಜಿ ತಮ್ಮನ್ನು ದೇವರ ಕೈಯಲ್ಲಿರುವ ಸಾಧನವಾಗಿಸಿಕೊಂಡು ಈ ತಪೋನಗರವನ್ನು ನಿರ್ಮಿಸಿದರು. ಸೃಷ್ಟಿಯ ಉಗಮವಾದ ಆ ಮೂಲ, ಮಾನಸ ಮತ್ತು ಅಂತರ್–ಮಾನಸಗಳಾಗಿ ಅಭಿವ್ಯಕ್ತವಾಗಿದೆ. ಆದ್ದರಿಂದ ಅವು ಅನೇಕ ಚೈತನ್ಯಗಳಿಗೆ ಒಡಲಾಗಿವೆ. ಆದ್ದರಿಂದಲೇ ಸೂಕ್ಷ್ಮಲೋಕದ ಪ್ರವಾಸಿಗರು ಇಲ್ಲಿಗೆ ಬರಲು ಇಚ್ಛಿಸುತ್ತಾರೆ, ಋಷಿಗಳು ಇಲ್ಲಿ ವಾಸವಾಗಿದ್ದಾರೆ, ದೇವತೆಗಳು ಈ ಭೂಮಿಗೆ ಬಂದಾಗ ಮೊದಲು ಇಲ್ಲಿಗೆ ಬರುತ್ತಾರೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ.

ಹೊಸ ವಿಶೇಷ ಚೈತನ್ಯಗಳನ್ನು ನಮ್ಮ ಭೂಮಿಗೆ ತಂದಾಗ, ಈ ಭೂಮಿಯಲ್ಲಿರುವ ಜನರ ಪರವಾಗಿ ಗುರೂಜಿಯವರು ಅದನ್ನು ಸ್ವೀಕರಿಸುತ್ತಾರೆ. ಈ ಆಧ್ಯಾತ್ಮಿಕ ಪ್ರಕ್ರಿಯೆಯ ಅಂಗವಾದ ನಕಾರಾತ್ಮಕ ಪರಿಣಾಮಗಳನ್ನು ಅವರು ಮನಃಪೂರ್ವಕವಾಗಿ ತಮ್ಮೊಳಗೆ ಲೀನವಾಗಿಸಿಕೊಳ್ಳುತ್ತಾರೆ. ಇವೆಲ್ಲವನ್ನೂ ಗುರೂಜಿಯವರು ತಮಗಾಗಿ ಏನನ್ನೂ ಬಯಸದೆ, ದೇವರ, ಋಷಿಗಳ ಮತ್ತು ಮನುಕುಲದ ಮೇಲಿನ ಪ್ರೀತಿಗಾಗಿ ಮಾಡುತ್ತಾರೆ.

ಅವರ ಅಪಾರ ತಿಳಿವಳಿಕೆಯಿಂದ, ಎಲ್ಲವನ್ನೂ ಮತ್ತು ಎಲ್ಲರನ್ನೂ ಒಳಗೊಂಡಿರುವ ಅಪರಿಮಿತ ಷರತ್ತಿಲ್ಲದ ದೈವೀಪ್ರೇಮದಿಂದ, ಗುರೂಜಿಯವರು ದೈವತ್ವದ ಪ್ರತಿನಿಧಿಯಾಗಿದ್ದಾರೆ ಮತ್ತು ಅವರ ನಿರ್ವ್ಯಾಜ್ಯ ಕೃಪೆಗೆ ಎಣೆಯಿಲ್ಲ. ತಮ್ಮ ಸಂಪರ್ಕಕ್ಕೆ ಬರುವ ಎಲ್ಲರ ಬದುಕಿನಲ್ಲೂ ಬೆಳಕನ್ನು ಮೂಡಿಸುತ್ತಾರೆ. ಗುರೂಜಿಯವರು ಮತ್ತು ಅವರ ಕೆಲಸದ ಬಗ್ಗೆ ನಾವು ಇಷ್ಟೆಲ್ಲ ಅರ್ಥಮಾಡಿಕೊಂಡಿದ್ದರೂ, ಅವರ ಕೆಲಸದ ಆಳ, ವಿಸ್ತಾರ, ಸೂಕ್ಷ್ಮತೆಗಳು ಹಾಗೂ ಮಹತ್ವವನ್ನು ಮತ್ತು ಅವರ ಬಹುಮುಖ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

### 13–03–2011

ಒಬ್ಬ ವ್ಯಕ್ತಿ, ತಮ್ಮ ಸ್ನೇಹಿತರೊಬ್ಬರು ಜನಗಳ ಗುಂಪಿನಲ್ಲಿ ಇದ್ದುದನ್ನು ನೋಡಿದರು. ಆದರೆ ಆ ಗುಂಪಿನ ಬಳಿ ಹೋದಾಗ ಅಲ್ಲಿ ತಮ್ಮ ಸ್ನೇಹಿತನನ್ನು ಕಾಣಲಿಲ್ಲ. ಆ ಸ್ನೇಹಿತನಿಗೆ ಅಲ್ಲಿ ಇರಬೇಕೆಂಬ ಬಲವಾದ ಇಚ್ಛೆ ಇದ್ದುದರಿಂದ, ಅವನು ಸೂಕ್ಷ್ಮರೂಪದಲ್ಲಿ ಕೆಲವು ಕ್ಷಣ ಆ ಗುಂಪಿನಲ್ಲಿದ್ದ. ಆ ಸಮಯದಲ್ಲಿ ಈ ವ್ಯಕ್ತಿಗೆ ಅವನನ್ನು ನೋಡಲು ಸಾಧ್ಯವಾಯಿತು.

ಇನ್ನೊಂದು ಸಂದರ್ಭದಲ್ಲಿ, ಒಬ್ಬ ವ್ಯಕ್ತಿ ಒಂದು ಪ್ರಶ್ನೆಗೆ ಉತ್ತರ ತಿಳಿಯಲು ಅತ್ಯಂತ ಕುತೂಹಲ ಹೊಂದಿದ್ದರು. ಅವರಿಗೆ ನನ್ನನ್ನು ಭೇಟಿ ಮಾಡಲು ಆಗಲಿಲ್ಲ, ಆದರೆ ಆ ರಾತ್ರಿ ಕನಸಿನಲ್ಲಿ ನನ್ನನ್ನು ಭೇಟಿ ಮಾಡಿದರು. ಅವರಿಗೆ ಎಲ್ಲವೂ ಸ್ಮರಣೆಯಲ್ಲಿತ್ತು. ಅವರು ಸೂಕ್ಷ್ಮರೂಪದಲ್ಲಿ ನನ್ನ ಬಳಿ ಬಂದಿದ್ದರು. ಅವರಿಗೆ ಯಾವುದೋ ಬುದ್ಧಿಶಕ್ತಿ, ಯಾವುದೋ ಪ್ರಕ್ರಿಯೆ ಉತ್ತರ ತಿಳಿಯಲು ಸಹಾಯ ಮಾಡಿತು. ಇವೆಲ್ಲದರ ಹಿಂದೆ ಬಲವಾದ ಆಸೆ, ಬಲವಾದ ಉದ್ದೇಶವಿತ್ತು. ಒಂದು ಬಲವಾದ ಮತ್ತು ಪರಿಶುದ್ಧವಾದ ಉದ್ದೇಶವಿದ್ದರೆ ಋಷಿಗಳನ್ನು ಸಂಪರ್ಕಿಸುವುದು ಅಥವಾ ಶಂಬಲಕ್ಕೆ ಹೋಗುವಂತಹ ಮಹತ್ಕಾರ್ಯಗಳು ಸಾಧ್ಯ.

ನಮ್ಮ ಒಳದನಿಯ ಬಗ್ಗೆ ಅರಿವಿರಬೇಕು ಮತ್ತು ಅದನ್ನು ಗುರುತಿಸಬೇಕು. ಅದನ್ನು ಅಂತರ್–ಗ್ರಹಣ ಶಕ್ತಿಯೊಂದಿಗೆ ಪರೀಕ್ಷಿಸಬೇಕು. ಕೆಲವು ಸಲ ಅಂತರ್–ಗ್ರಹಣ ಶಕ್ತಿಯೂ ಕೂಡಾ ಸತ್ಯವನ್ನು ತಿಳಿಸಲಾರದು, ಏಕೆಂದರೆ ಅದು ಸತ್ಯವನ್ನು ಸಂಪೂರ್ಣವಾಗಿ ಗ್ರಹಿಸಲಾರದು. ಆತ್ಮ ಕೂಡಾ ತಪ್ಪುಗಳನ್ನು ಮಾಡುತ್ತದೆ ಎಂಬುದು ಬಹಳ ಸೋಜಿಗದ ಸಂಗತಿ. ಇಂಥ ಸಮಯದಲ್ಲಿ ನಾವು ಆತ್ಮಸಾಕ್ಷಿಯನ್ನು ಕೇಳುತ್ತೇವೆ, ಏಕೆಂದರೆ ಅದು ಯಾವಾಗಲೂ ಸತ್ಯವನ್ನು ಹೇಳುತ್ತದೆ. ಆತ್ಮಸಾಕ್ಷಿ ಏನೆಂಬುದು ನಮಗೆ ಪೂರ್ಣವಾಗಿ ಅರಿಯಲಾಗಿಲ್ಲ. ಆತ್ಮಸಾಕ್ಷಿ ದೈವದೊಂದಿಗೆ ಸಂಬಂಧ ಹೊಂದಿರುವುದರಿಂದ ಅದಕ್ಕೆ ಸತ್ಯವನ್ನು ತಿಳಿಯಲು ಸಾಧ್ಯ. ಈ ವಿಷಯದಲ್ಲಿ ನಾವು ಹೆಚ್ಚು ಸಂಶೋಧನೆ ಮಾಡಬೇಕಾಗಿದೆ.

ಅಹಂ ನಕಾರಾತ್ಮಕ ಅಲ್ಲ. ಅದು ಸಾಮಾನ್ಯವಾಗಿ ನಮ್ಮನ್ನು ತಪ್ಪುದಾರಿಗೆ ಎಳೆಯುವುದಿಲ್ಲ. ಅದು ದುರಹಂಕಾರಿಯಾಗಲು ನಾವು ಅವಕಾಶ ಮಾಡಿಕೊಟ್ಟಾಗ ಅದು ವಿಚಿತ್ರವಾಗಿ ವರ್ತಿಸುತ್ತದೆ. ಹಾಗಿಲ್ಲದಿದ್ದರೆ ಅಹಂ ನಮ್ಮ ಗೆಳೆಯ.

ಹಿಂದಿನ ಜನ್ಮದಿಂದ ಬಂದಿರುವ ಜ್ಞಾನ ನಮಗೆ ಈ ಮಟ್ಟದಲ್ಲಿ ಎಷ್ಟು ತಿಳಿದಿದೆ ಎಂಬುದು ನಮ್ಮ ಅಗತ್ಯಗಳು, ನಮ್ಮ ಧ್ಯೇಯಗಳನ್ನು ಅವಲಂಭಿಸಿರುತ್ತದೆ. ಉದಾಹರಣೆಗೆ, ಒಬ್ಬ ಸಂಗೀತಗಾರ. ಒಬ್ಬ ವ್ಯಕ್ತಿ ತನ್ನ ಹಿಂದಿನ ಜನ್ಮದಲ್ಲಿ ಸಂಗೀತಗಾರನಾಗಿದ್ದಿದ್ದರೆ, ಈ ಜನ್ಮದಲ್ಲಿಯೂ ಸಂಗೀತವನ್ನು ತೆಗೆದುಕೊಂಡರೆ ಮೊದಲು ಪಡೆದುಕೊಂಡಿದ್ದ ಜ್ಞಾನ ಆತನ ಅರಿವಿಗೆ ಬರುತ್ತದೆ. ಇಲ್ಲವಾದರೆ ಜನ್ಮಾಂತರಗಳವರೆಗೆ ಅದು ಸುಪ್ತವಾಗಿರುತ್ತದೆ. ಹಲವಾರು ಜನ್ಮಾಂತರಗಳ ನಂತರ ಆ ವ್ಯಕ್ತಿ ಸಂಗೀತ ತೆಗೆದುಕೊಳ್ಳ ಬಯಸಿದರೆ, ಆಗ ಅದರ ಜ್ಞಾನ ಅವನ ಅರಿವಿಗೆ ಬರುತ್ತದೆ. ಈ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ.

ಇತ್ತೀಚೆಗೆ ಜಪಾನಿನಲ್ಲಿ ಉಂಟಾದ ದುರಂತ ಅನೇಕ ಅಂಶಗಳ ಸಮ್ಮಿಶ್ರಣದಿಂದಾಗಿದೆ. ಪ್ರಳಯದ ಒಂದು ಭಾಗ, 2012ಕ್ಕೆ ಕರೆದೊಯ್ಯುವ ಪ್ರಕ್ರಿಯೆಗಳು ಮತ್ತು ಕೆಲವು ಅಗೋಚರ ಅಂಶಗಳು ಇದಕ್ಕೆ ಕಾರಣವಾಗಿವೆ. ಜಪಾನೀಯರಿಗೆ ಮಾತ್ರವಲ್ಲ ಪ್ರತಿಯೊಬ್ಬರಿಗೂ ಇದರ ಪರಿಣಾಮ ತಟ್ಟಿದೆ. ನಾವು ವ್ಯಕ್ತಿಗಳಾಗಿ, ಧ್ಯಾನಿಗಳಾಗಿ ಮಾಡಬಹುದಾದ ಉತ್ತಮ ಕೆಲಸವೆಂದರೆ ಬೆಳಕನ್ನು ಕಳುಹಿಸುವುದು. ಲಿಬಿಯಾಗೆ ಕೂಡಾ ಹೆಚ್ಚಿನ ಬೆಳಕಿನ ಅಗತ್ಯವಿದೆ. ಆದ್ದರಿಂದ ಜಪಾನ್ ಮತ್ತು ಲಿಬಿಯಾಗಳಿಗೆ ಬೆಳಕನ್ನು ಚಾನಲ್ ಮಾಡೋಣ.

### 20–03–2011

ತಪೋನಗರದಲ್ಲಿ ಧ್ಯಾನಮಾಡುವಾಗ ಒಬ್ಬ ವ್ಯಕ್ತಿ ನನ್ನನ್ನು ಒಂದು ದೊಡ್ಡ ಬೆಳಕಿನ ರೂಪದಲ್ಲಿ ನೋಡಿದರು. ಅವರು ಒಂದು ಸಣ್ಣ ಬೆಳಕಿನ ಕಣವಾಗಿ ಆ ಬೆಳಕಿನಲ್ಲಿ ಲೀನವಾದರು. ನಾವು ಋಷಿಗಳನ್ನು ಅಥವಾ ಬೆಳಕಿನ ಸಾಗರವನ್ನು ಅನುಭವಿಸಲು ಪ್ರಯತ್ನಿಸಿದಾಗ ನಾವು ಬೆಳಕಿನ ಕಣಗಳಾಗುತ್ತೇವೆ. ಇದಕ್ಕೆ ಅತ್ಯಂತ ಮುಖ್ಯವಾದ ಅಂಶವೆಂದರೆ ನಮ್ರತೆ. ನನ್ನ ಈ ಮನುಷ್ಯ ರೂಪದಿಂದಾಚೆ, ನಾನು ಬಹಳಷ್ಟು ಬೆಳಕು, ಪ್ರೀತಿ ಮತ್ತು ನಿಮ್ಮೊಡನೆ ಹಂಚಿಕೊಂಡಿರುವ ಜ್ಞಾನ, ಇನ್ನೂ ಅರ್ಥ ತಿಳಿಯಬೇಕಾದ ಜ್ಞಾನವನ್ನು ಹೊಂದಿದ್ದೇನೆ. ನಾನು ನನ್ನದೇ ಆದ ವಿವೇಕ ಹೊಂದಿದ್ದೇನೆ ಮತ್ತು ಯಾವಾಗಲೂ ಋಷಿಗಳ ಸಂಪರ್ಕದಲ್ಲಿರುತ್ತೇನೆ. ಜನರು ತಮಗೆ ಬೇಕಾದುದನ್ನು ಪಡೆದುಕೊಳ್ಳಲು ಈ ಯಾವುದೇ ಅಂಶಗಳನ್ನು ಪ್ರಜ್ಞಾಪೂರ್ವಕವಾಗಿ ಸಂಪರ್ಕಿಸಬಹುದು.

ಒಬ್ಬ ವ್ಯಕ್ತಿ ತಮ್ಮ ಪತ್ರದಲ್ಲಿ, ತಪೋನಗರವು ಪೂರ್ಣವಾಗಿ ಬೆಳಕಿನಿಂದ ಕೂಡಿದ್ದು, ಅದರ ಸುತ್ತ ಕತ್ತಲೆ ಇದ್ದುದನ್ನು ನೋಡಿದುದಾಗಿ ತಿಳಿಸಿದರು. ಇದು ಬೆಳಕಿಗಾಗಿ ಇರುವ ಯುಗ, ಬೆಳಕಿನ ಯುಗ. ನಾವು ಅದನ್ನು ಹರಡುತ್ತೇವೆ. ಇಲ್ಲಿ ಹೆಚ್ಚಿನ ಬೆಳಕು ಮತ್ತು ಪ್ರೀತಿ ಇದೆ. ನಾವಿನ್ನೂ ಪೂರ್ಣವಾಗಿ ಇದನ್ನು ಅನುಭವಿಸಿಲ್ಲ. ಈ ಪ್ರೀತಿ, ಋಷಿಗಳ ಪ್ರೀತಿ.

ಮಾನವೀಯ ಸಂಬಂಧಗಳಲ್ಲಿ ನಾವು ಒಂದು ಅಂತರವನ್ನು ಇಟ್ಟುಕೊಂಡಾಗ, ಒಬ್ಬ ವ್ಯಕ್ತಿಯ ಸಕಾರಾತ್ಮಕತೆಯೊಂದಿಗೆ ಸಂಪರ್ಕಗೊಂಡಾಗ ಅವು ಸುಂದರವಾಗಿರುತ್ತವೆ. ಅದೇಕೋ ನಾವು ಮಾನವೀಯ ಸಂಬಂಧಗಳ ಸುಖ ಅನುಭವಿಸುವ ಕಲೆಯನ್ನು ಮರೆತಿದ್ದೇವೆ. ನಾವು ಇತರರೊಂದಿಗೆ ಸಂಬಂಧ ಬೆಳೆಸಿದಾಗ ಧ್ಯಾನಗಳಲ್ಲಿ ಅನುಭವಿಸಿದ ವಿಶಾಲತೆಯನ್ನು ವ್ಯಕ್ತಪಡಿಸಬೇಕು. ಇಲ್ಲವಾದರೆ ಧ್ಯಾನದಲ್ಲಿ ವಿಶಾಲತೆಯನ್ನು ಮತ್ತೆ ಅನುಭವಿಸಲು ಆಗುವುದಿಲ್ಲ. ಅಂತರಂಗದ ಮತ್ತು ಬಹಿರಂಗದ ವಿಶಾಲತೆ ಪರಸ್ಪರ ಸಂಪರ್ಕ ಹೊಂದಿವೆ. ಎಲ್ಲ ಕಾಲದಲ್ಲಿಯೂ ವಿಶಾಲತೆಯನ್ನು ವ್ಯಕ್ತಪಡಿಸುವುದು ಆಧ್ಯಾತ್ಮಿಕತೆ.

ಧ್ಯಾನ ಎಲ್ಲ ಹಂತಗಳಲ್ಲಿ ಸ್ಪಷ್ಟತೆಯನ್ನು ತರುತ್ತದೆ. ಈ ಮಾರ್ಗದ ಧ್ಯಾನಿಗಳು ಋಷಿಗಳೊಡನೆ ಸಂಪರ್ಕ ಪಡೆದಿದ್ದಾರೆ, ಆದ್ದರಿಂದ ತಪ್ಪುಗಳನ್ನು ಮಾಡಲಾಗುವುದಿಲ್ಲ. ನಾವು ತಪ್ಪುಗಳನ್ನು ಮಾಡಿದ್ದರೆ, ನಾವು ಮತ್ತೆ ಜಾಗೃತರಾಗಬಹುದು ಹಾಗೂ ಧ್ಯಾನದಿಂದ ಪಡೆದ ಎಲ್ಲ ಪ್ರಯೋಜನಗಳನ್ನು ನಾವು ಉಪಯೋಗಿಸಿಕೊಳ್ಳಬಹುದು.

ಕೆಲವು ಸಲ ಧ್ಯಾನದಲ್ಲಿ ಕಾಲದ ಗತಿ ಬದಲಾಗುವುದನ್ನು ನಮ್ಮಲ್ಲಿ ಅನೇಕರು ಅನುಭವಿಸಿದ್ದಾರೆ. ಧ್ಯಾನದ ಸಮಯದಲ್ಲಿ ನಾವು ಕಾಲದಲ್ಲಿ ಪ್ರಯಾಣ ಮಾಡುವ ಸಾಧ್ಯತೆ ಇದೆ. ಇದಕ್ಕೆ ತರಬೇತಿ ಮತ್ತು ಇನ್ನೂ ಕೆಲವು ತಂತ್ರಗಳ ಅಗತ್ಯವಿದೆ.

ಧ್ಯಾನದ ಉದ್ದೇಶ ಸ್ಪಷ್ಟವಾಗಿದ್ದರೆ ಸರಿಯಾದ ಮಾರ್ಗವನ್ನು ತಲುಪಲು ಸಾಧ್ಯ.

2012ಕ್ಕೆ ಸಿದ್ಧತೆ ಮಾಡಿಕೊಳ್ಳುವುದರ ಬಗ್ಗೆ ಋಷಿಗಳಿಂದ ಅತ್ಯಂತ ಸ್ಪಷ್ಟವಾದ ಎರಡು ಸೂಚನೆಗಳೆಂದರೆ: ಮನಸ್ಸುಮಾಡಿ ನಿಮ್ಮ ಶರೀರವ್ಯವಸ್ಥೆಯಿಂದ ನಕಾರಾತ್ಮಕತೆಯನ್ನು ತೊಡೆದು ಹಾಕಿ ಸಿದ್ಧರಾಗುವುದು ಮತ್ತು ಬೆಳಕನ್ನು ಯಾವಾಗಲೂ ಹೊಂದಿರುವುದು.

ಭೂಮಿ, ಪ್ರಕೃತಿ, ಪ್ರಾಣಿಗಳು, ಗಿಡಮರಗಳು, ಪಕ್ಷಿಗಳು ಇತ್ಯಾದಿಗಳೆಲ್ಲ ಹೊಸ ಚೈತನ್ಯಗಳನ್ನು ಸುಲಭವಾಗಿ ಸ್ವೀಕರಿಸುತ್ತವೆ ಮತ್ತು ಅಂತರ್ಗತ ಮಾಡಿಕೊಳ್ಳುತ್ತವೆ. ಅವು ಹೊಸಯುಗ ಪ್ರವೇಶಿಸಲು ಕಾಯುತ್ತಿವೆ. ಆದರೆ ಅನೇಕ ಜನರು ಅವುಗಳನ್ನು ತಿರಸ್ಕರಿಸುತ್ತಾರೆ. 2012ರ ಘಟನೆಗಳ ಪರಿಣಾಮವನ್ನು ಗಮನಿಸಿದ ಮೇಲೆ ಋಷಿಗಳು

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ನಿಯತಕಾಲಿಕವಾಗಿ ಅಧ್ಯಯನ ಮಾಡಿ, ಪರಿವರ್ತನಾಕಾಲದ ಅವಧಿಯ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವರು. ಪ್ರಳಯದ ಪ್ರಕ್ರಿಯೆಗಳೆಲ್ಲ 2016 ಅಥವಾ 2018ರಲ್ಲಿ ಕೊನೆಗೊಳ್ಳಬೇಕೆಂದು ನಾವು ಬಯಸುತ್ತೇವೆ. ಇನ್ನು ಮುಂದೆ ಪ್ರಳಯದ ಪ್ರಕ್ರಿಯೆಗಳು ತೀವ್ರಗತಿಯಲ್ಲಿ ಸಾಗುತ್ತವೆ.

ಹೋಳಿಹಬ್ಬ ಕಾಮದಹನವನ್ನು ಅಭ್ಯಾಸ ಮಾಡುವ ದಿನವಾಗಿದೆ. ನಮ್ಮ ಮುಂದೆ ಬೆಂಕಿ ಇದೆ ಎಂದು ಊಹಿಸಿಕೊಳ್ಳಬೇಕು. ಅದು ಭಗವಾನ್ ಶಿವನಿಂದ ಬರುವ ಚೈತನ್ಯ. ಆ ಬೆಂಕಿಯಲ್ಲಿ ನಮ್ಮ ನಕಾರಾತ್ಮಕತೆಗಳೆಲ್ಲವನ್ನು ಸುಡುವುದರ ಮೂಲಕ, ಅವುಗಳನ್ನು ತೆಗೆದುಹಾಕಬೇಕು. ಇದನ್ನು ನೀವು ಯಾವತ್ತು ಬೇಕಾದರೂ ಅಭ್ಯಾಸ ಮಾಡಬಹುದು, ಆದರೆ ಹುಣ್ಣಿಮೆಯ ದಿನ ಅದು ಬಹಳ ಪರಿಣಾಮಕಾರಿ. ನೀವು ಶಿವನನ್ನು ಪ್ರಾರ್ಥಿಸಿ, ಅವನಿಂದ ಚೈತನ್ಯಗಳು ಬರುತ್ತಿವೆ ಎಂದು ಕಲ್ಪಿಸಿಕೊಂಡು ನಿಮ್ಮ ಶರೀರ ವ್ಯವಸ್ಥೆಯಲ್ಲಿ ತುಂಬಿಸಿಕೊಳ್ಳಬಹುದು. ಅವು ನಮ್ಮನ್ನು ಪರಿಶುದ್ಧ ಮಾಡುತ್ತವೆ.

ಕೆಲವು ಜ್ಯೋತಿಷಿಗಳು ದೂರದರ್ಶನದಲ್ಲಿ ಸಲಹೆ ನೀಡಿದಂತೆ ಸೂಪರ್‌ಮೂನ್ ಅನ್ನು ನೋಡಲೂ ಬಾರದು ಎಂದು ಕೆಲವು ಜನರು ಹೇಳಿದಾಗ, ನನಗೆ ತೀವ್ರವಾದ ಆಶ್ಚರ್ಯವಾಯಿತು. ಅದು ನೋಡಲು ಎಂಥ ಅದ್ಭುತವಾದ ದೃಶ್ಯ! ಈ ವಿಷಯಗಳನ್ನು ಯಾವ ಆಧಾರದ ಮೇಲೆ ಹೇಳಿದರು ಎಂಬುದು ನನಗೆ ತಿಳಿಯದು. ಆದರೆ ಇಂಥ ವಿಷಯಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವುದು ವಿಷಾದನೀಯ.

ಒಂದು ರೀತಿಯ ವೈಯಕ್ತಿಕ ತರಬೇತಿ ಕೊಡುವ ಕಾಲ ಹತ್ತಿರ ಬಂದಿದೆ. ನೀವು ಏನನ್ನಾದರೂ ಸಾಧಿಸಿ, ಒಂದು ಹಂತವನ್ನು ತಲುಪಿದರೆ ನನ್ನನ್ನು ಭೇಟಿ ಮಾಡಿ. ಅದನ್ನು ನಿಮ್ಮ ಅಂತರ್-ಗ್ರಹಣಶಕ್ತಿಯೊಂದಿಗೆ, ನಿಮ್ಮ ಆತ್ಮಸಾಕ್ಷಿಯೊಂದಿಗೆ ಪರೀಕ್ಷಿಸಿಕೊಳ್ಳಿ. ನಾನು ಕೆಲವು ವಿಷಯಗಳನ್ನು ರವಾನಿಸಲು ಬಯಸುತ್ತೇನೆ. ನಾವು ಮಾರ್ಪಾಡಾಗಲು ಸಿದ್ಧರಾಗಬೇಕು. 2012ಕ್ಕೆ ಸಿದ್ಧತೆ ಮಾಡಿಕೊಳ್ಳುವುದಕ್ಕಿಂತ ಇಂದು ಬದುಕುವುದು ಬಹಳ ಮುಖ್ಯ.

27–03–2011

ಧ್ಯಾನದಲ್ಲಿ ಅತ್ಯಂತ ಪ್ರಮುಖ ಕಾರ್ಯವೆಂದರೆ ನಮ್ಮ ಅರಿವನ್ನು ಪ್ರಜ್ಞಾಸಾಗರಕ್ಕೆ ಕೊಂಡೊಯ್ಯುವುದು. ಇದು ನಮ್ಮ ಶರೀರ ವ್ಯವಸ್ಥೆಯನ್ನು ಮೌನಗೊಳಿಸಿದಾಗ ಸಂಭವಿಸುತ್ತದೆ. ಆಗ ನಮಗೆ ಸಮಾಧಿಯ ಅನುಭವ ಪ್ರಾರಂಭವಾಗುತ್ತದೆ. ನಾವು ಪ್ರತಿಯೊಂದು ರೀತಿಯಿಂದ ಪರಿಶುದ್ಧರಾದಾಗ ಅರಿವಿನ ಮಟ್ಟದಲ್ಲಿ ಬದಲಾವಣೆ ಸಂಭವಿಸುತ್ತದೆ, ಇಲ್ಲವಾದರೆ ಅದರ ಮಾರ್ಗ ಮುಚ್ಚಲ್ಪಡುತ್ತದೆ.

ಹೋರಾಟಗಳು ಮತ್ತು ಸೋಲುಗಳು ಈ ಭೂಮಿಯ ವೈಶಿಷ್ಟ್ಯಗಳು. ನಾವು ಹೋರಾಟಕ್ಕಿಳಿದಾಗ ಮಾತ್ರ ನಮ್ಮ ಇಡೀ ವ್ಯಕ್ತಿತ್ವವನ್ನು ಸಜ್ಜುಗೊಳಿಸುತ್ತೇವೆ, ಇಲ್ಲವಾದರೆ ನಾವು ಆಲಸಿಗಳು ಮತ್ತು ನಿಷ್ಕ್ರಿಯರು ಆಗುತ್ತೇವೆ. ನಾವು ಸೋತಾಗ ಮತ್ತೆ ಸಜ್ಜಾಗುತ್ತೇವೆ. ನಾವು ನಮ್ಮ ಗುರಿಗಳನ್ನು ಸಾಧಿಸಿದಾಗ ರೋಮಾಂಚನಗೊಳ್ಳುತ್ತೇವೆ. ಈ ಭೂಮಿಯ ಮೇಲೆ ಇವೆಲ್ಲಾ ಅಸಾಮಾನ್ಯ ಅನುಭವಗಳು. ಅಂಥ ವಿಶಿಷ್ಟತೆಗಳನ್ನು ಅನುಭವಿಸಲೆಂದು ಬೇರೆ ಗ್ರಹಗಳ ಜನರು ಇಲ್ಲಿ ಜನ್ಮ ತಳೆಯುತ್ತಾರೆಂಬುದು ವಾಸ್ತವ ಸಂಗತಿ.

ಧ್ಯಾನಮಾಡಲು ಪ್ರಾರಂಭಿಸಿದ ಕೆಲವು ತಿಂಗಳಲ್ಲಿ ನಾವು ಶಾಂತಿಯನ್ನು ಸಾಧಿಸುತ್ತೇವೆ. ಶಾಂತಿ ನೆಲೆಯೂರಲು ನಾವು ಅವಕಾಶ ಕೊಡಬೇಕು, ಆಗ ಮಾತ್ರ ನಮ್ಮ ಗುರಿಗಳು ಮತ್ತು ಅಗತ್ಯಗಳ ಬಗ್ಗೆ ಸ್ಪಷ್ಟತೆಯುಂಟಾಗುತ್ತದೆ. ಇಲ್ಲದೇ ಹೋದರೆ ನಾವು ಯಾವಾಗಲೂ ಗೊಂದಲದಲ್ಲಿರುತ್ತೇವೆ ಮತ್ತು ಬಹುಶಃ ನಮ್ಮ ಗುರಿಗಳಿಂದ ವಿಮುಖರಾಗುತ್ತೇವೆ. ನಮ್ಮ ಆದ್ಯತೆಗಳು ಸ್ಪಷ್ಟವಾಗುತ್ತವೆ. ನಾವು ಹೇಗೆ ಮತ್ತು ಎಷ್ಟು ಸಂಬಂಧ ಕಲ್ಪಿಸಬೇಕು, ಯಾವುದು ಮುಖ್ಯ, ಸಂಬಂಧಗಳ ಮೌಲ್ಯ, ಯಾರು ನಿಜವಾದ ಸಂಬಂಧಿಗಳು ಎಂಬುದನ್ನು ಅರಿಯುತ್ತೇವೆ, ಎಲ್ಲವೂ ಸ್ಪಷ್ಟವಾಗುತ್ತವೆ. ಆದರೆ ಕೆಲವು ಸಲ ಇವೆಲ್ಲವನ್ನೂ ಮೀರಿ ಮುಂದೆ ಹೋಗುತ್ತೇವೆ ಮತ್ತು ಆಧ್ಯಾತ್ಮದ ಗುರಿಗಳನ್ನು ಮರೆಯುತ್ತೇವೆ.

ನಾವು ಧ್ಯಾನಮಾಡಲು ಆರಂಭಿಸಿದಾಗ ಅನೇಕ ಸಲ, ಲೌಕಿಕ ಸಮಸ್ಯೆಗಳು ಪರಿಹಾರವಾಗುತ್ತವೆ. ನಮ್ಮ ಗಮನವೆಲ್ಲ ಸಾಧನೆಯ ಮೇಲೆ ಕೇಂದ್ರೀಕರಿಸಲಿ ಎಂದು ಋಷಿಗಳು ಇಂಥ ಪ್ರಯೋಜನಗಳನ್ನು ಕೊಡುತ್ತಾರೆ. ಆದರೆ ಅನೇಕ ಸಲ, ಒಮ್ಮೆ ಇಂತಹ ಲೌಕಿಕ ಲಾಭಗಳು ಸಿಕ್ಕಿದ ಮೇಲೆ, ನಾವು ಕೇವಲ ಲೌಕಿಕತೆಯ ಹಿಂದೆ ಬಿದ್ದು, ಧ್ಯಾನಗಳನ್ನು ಮರೆಯುತ್ತೇವೆ. ಆಗ ಎಲ್ಲ ಸಮಸ್ಯೆಗಳು ಮತ್ತೆ ತಲೆದೋರುತ್ತವೆ. ನನ್ನ ಸರಳವಾದ ಸಲಹೆ ಎಂದರೆ ನೀವು ಧ್ಯಾನ ಮಾಡಲು ಪ್ರಾರಂಭಿಸಿ, ಆಗ ನಿಮ್ಮ ಸಮಸ್ಯೆಗಳೆಲ್ಲ ಮಾಯವಾಗುತ್ತವೆ. ಇದನ್ನು ಪ್ರಯತ್ನಿಸಿ ಮತ್ತು ಅನುಭವಿಸಿ.

ಒಮ್ಮೆ ಆಧ್ಯಾತ್ಮದ ಗುರಿಯನ್ನು ಆರಿಸಿಕೊಂಡ ಮೇಲೆ ನಾವು ಎಚ್ಚರವಾಗಿರಬೇಕು, ಅದರಲ್ಲಿ ಕೇಂದ್ರೀಕರಿಸಬೇಕು ಮತ್ತು ಪರಿಶುದ್ಧರಾಗಿ ಸಾಧನೆ ಮಾಡಬೇಕು. ನಮ್ಮೆಲ್ಲಾ ವೈಯಕ್ತಿಕ ಬಯಕೆಗಳು, ವೈಯಕ್ತಿಕ ಕಾರ್ಯಕ್ರಮಗಳು ಆಧ್ಯಾತ್ಮಿಕ ಗುರಿಯೊಂದಿಗೆ ಹೊಂದಿಕೆಯಾಗಬೇಕು. ಹೊಂದಿಕೆ ಇಲ್ಲವಾದರೆ ಸಹಜವಾಗಿಯೇ ಅಡಚಣೆ ಯುಂಟಾಗುತ್ತದೆ. ನಾವು ಪ್ರಗತಿಹೊಂದುವುದಿಲ್ಲ, ವಿಮುಖರಾಗುತ್ತೇವೆ. ನಾವು ಆಧ್ಯಾತ್ಮಿಕ ಗುರಿಯನ್ನು ಕೈಗೊಂಡು ಇತರ ಆಸಕ್ತಿಗಳನ್ನು, ಬಯಕೆಗಳನ್ನು ಸಮರ್ಪಿಸಿಕೊಂಡರೆ, ಅತ್ಯಂತ ಕಡಿಮೆ ಕಾಲದಲ್ಲಿ ನಾವು ಆಧ್ಯಾತ್ಮಿಕ ಗುರಿಗಳನ್ನು ಸಾಧಿಸಬಲ್ಲವರಾಗುತ್ತೇವೆ. ನಾವು ಅತ್ಯಂತ ಮುಖ್ಯವಾಗಿ ನಮ್ಮ ಅಹಂ ಅನ್ನು ಸಮರ್ಪಿಸಬೇಕು. ನಾವು ನಮ್ಮ ಗುರಿಗೆ, ಋಷಿಗಳಿಗೆ, ದೇವರಿಗೆ ನಮ್ಮನ್ನು ಹೊಂದಿಸಿಕೊಳ್ಳಬೇಕು.

ನಮ್ಮ ಸುತ್ತ ಇರುವ ಪ್ರತಿಯೊಂದನ್ನೂ ಮತ್ತು ನಮ್ಮನ್ನು ನಾವು ಸುಂದರವಾಗಿ ಇಟ್ಟುಕೊಳ್ಳುವುದು, ಮೊದಲನೆ ಶಂಬಲ ನಿಯಮಕ್ಕೆ ಸಂಬಂಧಿಸಿದಂತೆ ವಿಶ್ವಾಮಿತ್ರ ಮಹರ್ಷಿಗಳು ನೀಡಿದ ವಿಶೇಷವಾದ ಸೂಚನೆಗಳಲ್ಲಿ ಒಂದು. ಪ್ರತಿಯೊಬ್ಬ ವ್ಯಕ್ತಿಯಲ್ಲಿ, ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಂದು ವ್ಯವಸ್ಥೆಯಲ್ಲಿ ಒಂದು ಲಯ ಮತ್ತು ಸಮತೆ ಇರುತ್ತದೆ. ನಾವು ಅವುಗಳನ್ನು ಸುಮ್ಮನೆ ಗಮನಿಸುತ್ತಿರಬೇಕು. ಅವುಗಳನ್ನು, ಮುಖ್ಯವಾಗಿ ಸ್ವಭಾವವನ್ನು, ಕದಡುವ, ಬದಲಾಯಿಸುವ, ಅಥವಾ ಸುಧಾರಣೆ ತರುವ ಕೆಲಸವನ್ನು ಮಾಡಬಾರದು.

ಹಳೆಯದನ್ನು ಅನುಸರಿಸಬೇಕೇ ಅಥವಾ ಋಷಿಗಳಿಂದ ಬಂದಿರುವ ಹೊಸ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಬೇಕೇ ಎಂದು ನಿರ್ಧರಿಸಲಾರದೆ ಕೆಲವು ಜನ ಕಷ್ಟ ಪಡುತ್ತಾರೆ, ಡೋಲಾಯಮಾನದಲ್ಲಿರುತ್ತಾರೆ. ಇಂಥ ಸಮಯ ದಲ್ಲಿ ತಮ್ಮ ಅಂತರ್-ಗ್ರಹಣ ಶಕ್ತಿಯನ್ನು, ಸತ್ಯವನ್ನು ಅನುಸರಿಸಬೇಕು. ಯಾವುದಾದರೂ ಒಂದನ್ನು ಮಾತ್ರ ಅನುಸರಿಸಲು ಸಾಧ್ಯ.

ಕಳೆದ ಬಾರಿ ನಾನು ವೈಯಕ್ತಿಕ ತರಬೇತಿ ಬಗ್ಗೆ ಹೇಳಿದ್ದೆ. ನೀವು ಆಧ್ಯಾತ್ಮಿಕವಾಗಿ ಏನನ್ನಾದರೂ ಸಾಧಿಸಿದರೆ ನನ್ನ ಬಳಿಗೆ ಬನ್ನಿ. ದೂರಕಲಿಕೆ ಸಾಧಕರು ಒಳಗೊಂಡಂತೆ ಎಲ್ಲರಿಗೂ ಈ ಅವಕಾಶವಿದೆ. ಆದರೆ, ಶಾಂತಿಯಂತಹ ಯಾವುದಾದರೂ ನಿಜವಾದ ಸಾಧನೆ ಮಾಡಿರುವವರು ನನ್ನಲ್ಲಿಗೆ ಬನ್ನಿ. ಯಾವುದೋ ಕೆಲವು ಅನುಭವಗಳೊಂದಿಗೆ ನನ್ನ ಬಳಿ ಬರಬೇಡಿ.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರ ಬಗ್ಗೆ ಜಯಂತ್‌ರವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

"ಪದಗಳು ಮತ್ತು ಜನರ ಬಗ್ಗೆ ನಾನು ಆಸಕ್ತಿ ಕಳೆದುಕೊಳ್ಳುತ್ತಿದ್ದೇನೆ" ಎಂದು ಗುರೂಜಿಯವರು ಇತ್ತೀಚೆಗೆ ಹೇಳಿದರು. ಅವರು ಪ್ರತಿಯೊಬ್ಬರಿಗೂ ಸಹಾಯಮಾಡಿದ್ದಾರೆ, ಕೆಲವರಿಗೆ ವೈಯಕ್ತಿಕವಾಗಿ ಮತ್ತು ಅನೇಕರಿಗೆ ಆಧ್ಯಾತ್ಮಿಕವಾಗಿ. ಅವರು ನಮಗೆ ಅಪಾರವಾದ ಪ್ರೀತಿಯನ್ನು ತೋರಿಸಿದ್ದಾರೆ. ತಮ್ಮ ಅಂತರಾಳದ ಮಾತುಗಳನ್ನು ಭಾನುವಾರದ ತರಗತಿಗಳಲ್ಲಿ, ಅನೌಪಚಾರಿಕ ಚರ್ಚೆಗಳಲ್ಲಿ, ಖಾಸಗಿ ಕೂಟಗಳಲ್ಲಿ, ಅನಿಸಿಕೆಗಳು ಅಂಕಣದಲ್ಲಿ ಮತ್ತು ಪುಸ್ತಕಗಳಲ್ಲಿ ಹೇಳಿಕೊಂಡಿದ್ದಾರೆ.

ಅವುಗಳನ್ನು ನಾವು ಎಷ್ಟರಮಟ್ಟಿಗೆ ನಿಜವಾಗಿಯೂ ಅರ್ಥಮಾಡಿಕೊಂಡಿದ್ದೇವೆ, ಅಭ್ಯಾಸಮಾಡುತ್ತಿದ್ದೇವೆ ಮತ್ತು ನಮ್ಮ ಅಂತರಾಳಕ್ಕೆ ತೆಗೆದುಕೊಂಡಿದ್ದೇವೆ? ಯಾವ ರೀತಿ ಮತ್ತು ಎಷ್ಟರಮಟ್ಟಿಗೆ ಪ್ರತಿಸ್ಪಂದಿಸಿದ್ದೇವೆ? ಈ ಎಲ್ಲ ಪ್ರಶ್ನೆಗಳು ನಮ್ಮ ಎದುರು ನಿಂತಿವೆ. ಅವರ ನಿರಾಸೆಯನ್ನು ನಿವಾರಿಸಲು ನಮ್ಮಿಂದ ಸಾಧ್ಯವೇ? ಅಥವಾ ಆಗಲೇ ಕಾಲ ಮೀರಿದೆಯೇ? ಹೇಗೇ ಆದರೂ ಒಬ್ಬ ಮಾಸ್ಟರ್ ಕಾಯುತ್ತಾರೆ. ನಾವು ಈ ಪ್ರಶ್ನೆಗಳನ್ನು ಎದುರಿಸಲು ಇನ್ನೂ ಹೆಣಗುತ್ತಿದ್ದರೆ, ಅದು ದುಃಖದ ವಿಷಯ.

ಗುರೂಜಿಯವರ ಜೀವನ ಒಂದು ತಪಸ್ಸು, ಅದು ಉರಿಯುತ್ತ ಇಡೀ ಪ್ರಪಂಚಕ್ಕೇ ಬೆಳಕನ್ನು ಕೊಡುತ್ತಿದೆ. ಗುರೂಜಿಯವರಂಥ ಒಬ್ಬ ವ್ಯಕ್ತಿ, ನಮ್ಮ ಜೀವನಗಳಲ್ಲಿ ಬಹು ದೊಡ್ಡ ವ್ಯತ್ಯಾಸ ತರುತ್ತಾರೆ. ಈ ಮಾರ್ಗ ಅವರ ಪ್ರೀತಿಯ ಮೇಲೆ ನಿಂತಿದೆ. ಇಲ್ಲಿನ ಕಟ್ಟಡಗಳು, ಮರಗಿಡಗಳು, ಚೈತನ್ಯಗಳು, ಎಲ್ಲವೂ ಜೀವಶಕ್ತಿಯಿಂದ ಮತ್ತು ಪ್ರೀತಿಯಿಂದ ತುಂಬಿವೆ. ಜಾಗತಿಕ ಕಾರಣಗಳಿಗಾಗಿ ಇಲ್ಲಿರುವ ಈ ಚೈತನ್ಯಗಳು ಹಿಂದಿನ ಅನೇಕ ಜನ್ಮಗಳಿಂದ, ಗುರೂಜಿಯವರೊಂದಿಗೆ ವಿಶೇಷ ಆಧ್ಯಾತ್ಮಿಕ ಸಂಬಂಧವನ್ನು ಹೊಂದಿವೆ. ಜಾಗತಿಕ ಮಟ್ಟದಲ್ಲಿ ಮತ್ತು ವೈಯಕ್ತಿಕ ಮಟ್ಟದಲ್ಲಿ ಭವಿಷ್ಯವನ್ನು ಬದಲಿಸುವ, ಭವಿಷ್ಯವನ್ನು ಸೃಷ್ಟಿಸುವ ಚೈತನ್ಯಗಳು ಇವಾಗಿವೆ.

ಈ ಚೈತನ್ಯಗಳು ಹಾಗೆಯೇ ಸುಮ್ಮನೆ ಬರುವುದಿಲ್ಲ. ಮನುಕುಲದ ಪರವಾಗಿ ಒಬ್ಬ ವ್ಯಕ್ತಿ ಇವುಗಳನ್ನು ಸ್ವೀಕರಿಸುವ ಜವಾಬ್ದಾರಿ ಹೊರಬೇಕು. ಗುರೂಜಿಯವರು ಈ ಜವಾಬ್ದಾರಿ ಹೊತ್ತಿದ್ದಾರೆ. ಗುರೂಜಿಯವರಂಥ ಒಬ್ಬ ವ್ಯಕ್ತಿ ಉಂಟುಮಾಡುವ ವ್ಯತ್ಯಾಸವಿದು. ಇವರಿಂದ ಅಲ್ಲದಿದ್ದರೆ ನಮಗೆ ಗ್ರೇಟ್ ರಾ ಮತ್ತು ಇತರ ಅನೇಕ ಚೈತನ್ಯಗಳು ಲಭ್ಯವಾಗುತ್ತಿರಲಿಲ್ಲ. ಈ ಸಮಯದಲ್ಲಿ, ಈ ಭೂಮಿಯ ಮೇಲೆ ಗುರೂಜಿಯವರ ಉಪಸ್ಥಿತಿ ಅಷ್ಟೊಂದು ಮುಖ್ಯ. ■

## ಗುರೂಜಿ

ರಾಮಚಂದ್ರ. ಕೆ.; ಅನು: ವರ್ಷಾ ಗುರ್ಜರ್

ಹೆಚ್ಚುತ್ತಿರುವ ಅವ್ಯವಸ್ಥೆ ಮತ್ತು ಗೊಂದಲಗಳ ನಡುವೆ, ಒಬ್ಬ ಪ್ರಾಮಾಣಿಕ ಗುರು ದೊರೆತು, ಬೆಳಕಿನ ದಾರಿಯಲ್ಲಿ ಮುನ್ನಡೆಯುವುದು ಅಷ್ಟು ಸುಲಭವಲ್ಲ. ಇದಕ್ಕೆ ಸಮಸ್ತ ಮಾನವರ ಮತ್ತು ಜೀವಸಂಕುಲಗಳ ಬಗ್ಗೆ ನಿಜವಾದ ಕಾಳಜಿ ಹೊಂದಿರುವ, ಉನ್ನತ ಲೋಕಗಳಲ್ಲಿರುವ ಉನ್ನತ ಜೀವಿಗಳೊಂದಿಗೆ ಸಂಪರ್ಕ ಹೊಂದಿರುವ, ಉನ್ನತ ಜ್ಞಾನ ಲಭ್ಯವಿರುವ, ಜೀವನದ ನೋವು ಮತ್ತು ಕಷ್ಟಗಳನ್ನು ಅನುಭವಿಸಿ ತಿಳಿದಿರುವ, ಪರಿಸ್ಥಿತಿಗಳಾಚೆ ನೋಡಲು ಶಕ್ಯವಿರುವ ಮತ್ತು ಮಾನವಕುಲಕ್ಕೆ ಸಹಾಯಮಾಡಿ ಮಾರ್ಗದರ್ಶಿಸಬಲ್ಲ ಒಬ್ಬ ಮಾಸ್ಟರ್ ಬೇಕಾಗಿದ್ದಾರೆ.

ಗುರೂಜಿಯವರು ಈ ಎಲ್ಲಾ ಗುಣಗಳನ್ನೂ ಹೊಂದಿದ್ದು, ಅತ್ಯಂತ ಶ್ರೇಷ್ಠ ಗುರು ಮಹರ್ಷಿ ಅಮರರೊಂದಿಗಿದ್ದು, ಸಪ್ತಋಷಿಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸಿಕೊಂಡು, ನಮ್ಮನ್ನು ಮಾರ್ಗದರ್ಶಿಸುವ ಅತಿದೊಡ್ಡ ಸವಾಲನ್ನು ತೆಗೆದುಕೊಂಡು, ನಿಷ್ಪಕ್ಷಪಾತವಾದ ಮನೋಧರ್ಮದಿಂದ ಕೂಡಿದ ಆಧುನಿಕ ಗುರುವಾಗಿ ಹೊರಹೊಮ್ಮಿ, ಬೆಳಕಿನೆಡೆಗೆ ಮನುಕುಲವನ್ನು ಮಾರ್ಗದರ್ಶಿಸುತ್ತಿದ್ದಾರೆ.

ಅವರು ನಡೆದ ದಾರಿ, ನಮಗೆ ದಾರಿದೀಪವಾಗಿದೆ. ಅವರ ಬೋಧನೆಗಳು ನಮ್ಮ ಜೀವನದ ಗುರಿಯಾಗಿವೆ ಮತ್ತು ಅವರ ಜೀವನ ನಮಗೆ ಮಾರ್ಗದರ್ಶಕವಾಗಿದೆ. ■

## ಒಂದು ಮಾರ್ಗದರ್ಶಕ ಬೆಳಕು

ಮನೋಜ್ ಭೋಪ್ರ; ಅನು: ವರ್ಷಾ ಗುರ್ಜರ್

ಹಲವು ವರ್ಷಗಳ ಹಿಂದೆ ನಾನು ಗುರೂಜಿಯವರನ್ನು ಮೊದಲಬಾರಿಗೆ ಭೇಟಿಯಾದಾಗ, ಅವರಲ್ಲೇನೋ ವಿಶೇಷವಿರುವಂತೆ ನನಗನಿಸಿತ್ತು. ಕ್ರಮೇಣ ಅವರೊಬ್ಬ ಅತ್ಯಂತ ಶ್ರೇಷ್ಠ ವ್ಯಕ್ತಿ ಎಂದು ಅರಿವಾಯಿತು. ಅಷ್ಟೊಂದು ಸರಳತೆಯನ್ನು, ಸನ್ನಡತೆಯನ್ನು ಮತ್ತು ದಿವ್ಯನಗುವಿನಿಂದ ಹೊಳೆಯುವ ಕಣ್ಣುಗಳನ್ನು ಹೊಂದಿರುವ ವ್ಯಕ್ತಿಯೊಬ್ಬರು ನನಗೆ ಗುರುವಾಗುತ್ತಾರೆಂದು ನಾನು ಭಾವಿಸಿರಲಿಲ್ಲ. ಅವರನ್ನು ಭೇಟಿಯಾದ ನಂತರ, ನನ್ನ ವ್ಯಕ್ತಿತ್ವ ಅವರಲ್ಲಿ ವಿಲೀನವಾಗಿ ಹೊಸ ರೂಪವನ್ನು ಪಡೆಯಲಾರಂಭಿಸಿತು.

ಅವರ ಪ್ರಾಮಾಣಿಕ ಮಾರ್ಗದರ್ಶನ ನನ್ನನ್ನು ಹೆಚ್ಚು ಆಕರ್ಷಿಸಿತು. ಅವರು ನನ್ನ ಜೀವನದ ಕತ್ತಲ ರಾತ್ರಿಯಲ್ಲಿ ಪ್ರಕಾಶಮಾನ ನಕ್ಷತ್ರದಂತೆ ಬಂದರು. ನಾನು ಅವರ ಸಂಪರ್ಕಕ್ಕೆ ಬರದೇ ಇದ್ದಿದ್ದರೆ ನನ್ನ ಜೀವನ ಅಪೂರ್ಣ ಮತ್ತು ಉದ್ದೇಶರಹಿತ ಆಗಿರುತ್ತಿತ್ತು. ನಾನು ಜೀವನದ ವಿವಿಧ ಕ್ಷೇತ್ರಗಳಲ್ಲಿ ನೂರಾರು ಜನರ ಬಗ್ಗೆ ಓದಿದ್ದೇನೆ, ಆದರೆ ಅವರು ಯಾರೂ ಗುರೂಜಿಯವರಿಗೆ ಸರಿಸಮಾನರಾಗಿಲ್ಲ.

ಒಮ್ಮೆ ಗುರೂಜಿಯವರೊಂದಿಗಿದ್ದಾಗ, ಅವರ ಮಾನವತ್ವದ ಹಿಂದೆ ಇದ್ದ ಬೆಳಕಿನ ಮಹಾಸಾಗರವನ್ನು ಅನುಭವಿಸಿದೆ. ಗುರೂಜಿಯವರು, ಒಂದು ಬೆಳಕು, ಅವರ ಮನುಷ್ಯ ದೇಹ ಬರೀ ಸಾಂಕೇತಿಕ ಅಷ್ಟೆ. ನನ್ನ ಇಡೀ ಜೀವನ ಸಾಗಿಸಲು ಅವರ ನಗುವೊಂದೇ ಸಾಕು. ■

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಸೂಕ್ಷ್ಮ ಶರೀರ ಪ್ರಯಾಣ ಮುಖ್ಯವೇ?**

ಉ: ಹೌದು. ಅದು ಕೆಲವು ವ್ಯಕ್ತಿಗಳಿಗೆ ಮುಖ್ಯ. ಸೂಕ್ಷ್ಮ ಪ್ರಪಂಚದಲ್ಲಿ ಜನರನ್ನು ಭೇಟಿಯಾಗಿ, ಜ್ಞಾನವನ್ನು ಸಂಗ್ರಹಿಸುವ ಇಚ್ಛೆ ಇರುವವರಿಗೆ. ನಾವು ಸೂಕ್ಷ್ಮ ಪ್ರಯಾಣ ಮಾಡುವಾಗ ಅಲ್ಲಿ ಪ್ರಾಮಾಣಿಕ ಉದ್ದೇಶವಿರಬೇಕು. ಆಗ ನಮಗೆ ಸೂಕ್ಷ್ಮ ಮಟ್ಟದಲ್ಲಿ ಸಹಾಯ ಸಿಗುತ್ತದೆ.

**ಪ್ರ: ಇಂದಿನ ದಿನಗಳಲ್ಲಿ, ನಾವು ಮಾಡಬೇಕಾದ ಅತ್ಯಂತ ಮುಖ್ಯ ಅಭ್ಯಾಸ ಯಾವುದು?**

ಉ: 'ಬೆಳಕು' ಎಂದರೇನು ಎಂದು ಅರಿತು ಕೊಳ್ಳುವುದು, ಬೆಳಕನ್ನು ಅನುಭವಿಸುವುದು ಮತ್ತು ಬೆಳಕನ್ನು ಅಭಿವ್ಯಕ್ತಿಸುವುದೇ ಈ ದಿನಗಳಲ್ಲಿನ ತುಂಬಾ ಮುಖ್ಯವಾದ ಅಭ್ಯಾಸ.

**ಪ್ರ: ಈಗ ಆದರ್ಶವಾದಿಯ ಬದುಕು ಬದುಕಲು ಸಾಧ್ಯವೇ?**

ಉ: ನಾವು ಭೌತಿಕ ಮತ್ತು ಆಧ್ಯಾತ್ಮಿಕ ಪ್ರಪಂಚದ ನಿಯಮಗಳನ್ನು ಮೌಲ್ಯವ್ಯವಸ್ಥೆಯೊಂದಿಗೆ ಸಂಧಾನ ಮಾಡಿಕೊಳ್ಳದೆ ಪಾಲಿಸಬೇಕು. ಆದ್ದರಿಂದ, ಈಗ ಆದರ್ಶವಾದಿಯ ಬದುಕು ಬದುಕಲು ಸಾಧ್ಯವಿಲ್ಲ.

**ಪ್ರ: ನೀವು ಯಶಸ್ಸನ್ನು ಹೇಗೆ ಅರ್ಥೈಸುವಿರಿ?**

ಉ: ಅದು ವ್ಯಕ್ತಿಗಳನ್ನು ಅವಲಂಬಿಸಿದೆ. ನನಗೆ ಯಶಸ್ಸು ಎಂದರೆ, "ಭೌತಿಕ ಮತ್ತು ಆಧ್ಯಾತ್ಮಿಕ ಪ್ರಪಂಚವನ್ನು ಸರಿದೂಗಿಸಿಕೊಳ್ಳುವುದು. ಅಡಚಣೆಗಳು, ಪರೀಕ್ಷೆಗಳು ಮತ್ತು ಗೊಂದಲಗಳ ನಡುವೆಯೂ ಆಧ್ಯಾತ್ಮಿಕ ಪ್ರಗತಿ ಹೊಂದುವುದು. ಬೆಳಕಿನೊಂದಿಗೆ ಹೊಂದಾಣಿಕೆ, ಬೆಳಕನ್ನು ಅನುಭವಿಸುವಿಕೆ ಮತ್ತು ವ್ಯಕ್ತಗೊಳಿಸುವಿಕೆ. ನಮಗಾಗಿ ಮತ್ತು ಪ್ರಪಂಚಕ್ಕಾಗಿ ಶಾಂತಿಯನ್ನು ಸೃಷ್ಟಿಸುವುದು. ಜೀವ-ಶಕ್ತಿಯನ್ನು ವ್ಯಕ್ತಗೊಳಿಸುವುದು. ಮನುಷ್ಯತ್ವವನ್ನು ವ್ಯಕ್ತಗೊಳಿಸುವುದು."

**ಪ್ರ: ನಾವು ಸರಿಯಾದ ಪ್ರಶ್ನೆಯನ್ನು ಕೇಳುವುದು ಹೇಗೆ?**

ಉ: ನೀವು ಸರಿಯಾದ ಉತ್ತರಗಳನ್ನು ಪ್ರಾಮಾಣಿಕವಾಗಿ ಕೋರಿದರೆ, ಸರಿಯಾದ ಪ್ರಶ್ನೆ ನಿಮ್ಮಲ್ಲಿ ಬರುವುದು.

**ಪ್ರ: ಬದುಕಿನ ಅತ್ಯುತ್ತಮ ಆಸ್ತಿ ಯಾವುದು?**

ಉ: ನಾವು ಹೊಂದಬಹುದಾದ ಉತ್ಕೃಷ್ಟವಾದ ಮತ್ತು ಅತ್ಯುತ್ತಮವಾದ ಆಸ್ತಿ, ಜ್ಞಾನ.

**ಪ್ರ: ನಾವು ನಿಜವಾದ ಗುರುವನ್ನು ಹೇಗೆ ಕಂಡುಹಿಡಿಯುವುದು?**

ಉ: ನಿಜವಾದ ಅನ್ವೇಷಕನಾಗಿ.

**ಪ್ರ: ದ್ವೈತ ಮತ್ತು ಅದ್ವೈತಗಳು ಯಾವುವು?**

ಉ: ಇವು ಅನುಭವದ ಎರಡು ಸ್ಥಿತಿಗಳು. ದ್ವೈತ, ಸಮಾಧಿಯನ್ನು ಅನುಭವಿಸುವ ಒಂದು ಸ್ಥಿತಿ. ದ್ವೈತ ಎಂದರೆ ಎರಡು. ನಾವು ಮತ್ತು ಬೆಳಕು ಪ್ರತ್ಯೇಕವಾಗಿ ಅನುಭವವಾದಾಗ, ಅದು ದ್ವೈತ. ಈ ಪ್ರತ್ಯೇಕತೆ ಮಾಯವಾದಾಗ, ನಾವೇ ಬೆಳಕಾಗುತ್ತೇವೆ. ಆ ಅನುಭವವನ್ನು ಅದ್ವೈತ ಎಂದು ಕರೆಯಲಾಗುತ್ತದೆ. ಅದ್ವೈತ ಎಂದರೆ ಎರಡಲ್ಲ ಅಥವಾ ಒಂದು.

**ಪ್ರ: ನಾವು ಇದನ್ನು ನಮ್ಮ ಬದುಕಿನಲ್ಲಿ ಅಭ್ಯಾಸ ಮಾಡಬಹುದೇ?**

ಉ: ಇಲ್ಲ. ಇದು ಸಾಧ್ಯವಿಲ್ಲ. ಇದನ್ನು ನಾವು ಧ್ಯಾನದಲ್ಲಿ ಮಾತ್ರ ಅನುಭವಿಸಬಹುದು. ಬದುಕಿನಲ್ಲಿ ನಾವು ಒಂದು ತೆರನಾದ ಬಹು-ಸತ್ಯತೆಯನ್ನು ಅನುಭವಿಸ ಬೇಕಾಗುತ್ತದೆ, ಒಂದು ಸತ್ಯವನ್ನಲ್ಲ.

**ಪ್ರ: ಕ್ರಿಯಾವಿಧಿಗಳು ಮುಖ್ಯವಲ್ಲವೇ?**

ಉ: ನೀವು ಕ್ರಿಯಾವಿಧಿಗಳ ಮಹತ್ವ ಮತ್ತು ಅರ್ಥವನ್ನು ತಿಳಿದಾಗ, ಅವು ಮುಖ್ಯವಾಗುತ್ತವೆ. ಅವುಗಳ ಕುರುಡು ಆಚರಣೆ ನಮಗೆ ಸಹಾಯಕವಾಗುವುದಿಲ್ಲ.

**ಪ್ರ: ದೇವರನ್ನು ಅನುಭವಿಸಲು ಯಾವುದಾದರೂ ಕ್ರಿಯಾವಿಧಿಯ ಅವಶ್ಯಕತೆ ಇದೆಯೇ?**

ಉ: ಪ್ರೀತಿಯೊಂದೇ ಸಾಕು. ನಿಮ್ಮಲ್ಲಿ ನಿಜವಾದ ಪ್ರೀತಿಯಿದ್ದರೆ, ನೀವು ದೇವರನ್ನು ಅನುಭವಿಸಬಹುದು. ನಾವು ದೇವರನ್ನು ಯಾವುದೇ ಕ್ರಿಯಾವಿಧಿಯಿಂದ ಅನುಭವಿಸಲು ಸಾಧ್ಯವಿಲ್ಲ.

**ಪ್ರ: ಜೀವನದಲ್ಲಿ, ಒಂದು ವೈಫಲ್ಯತೆಗೆ ನಮ್ಮ ಕರ್ಮಗಳು ಕಾರಣವೇ ಅಥವಾ ನಮ್ಮ ಸಾಧನೆಯ ಕೊರತೆ ಕಾರಣವೇ ಎಂದು ಹೇಗೆ ತಿಳಿಯುವುದು?**

ಉ: ಅದನ್ನು ನಮ್ಮ ಅಂತರ್-ಗ್ರಹಣ ಶಕ್ತಿಯಿಂದ ತಿಳಿದುಕೊಳ್ಳಬೇಕು. ಕರ್ಮಗಳು ಪ್ರಭಾವ ಬೀರುತ್ತವೆ. ಅವು ವೈಫಲ್ಯತೆಗೆ ಕಾರಣವಾಗುವುದಿಲ್ಲ ಅಥವಾ ಅದನ್ನು ತಪ್ಪಿಸುವುದಿಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ತಪೋನಗರದಲ್ಲಿ ನಡೆದ ಅಮರಜಯಂತಿ ಕಾರ್ಯಕ್ರಮದ ಧ್ಯಾನದಲ್ಲಿ ನನಗೆ ಅಲ್ಲಿ ಇದ್ದಂತೆಯೂ ಮತ್ತು ಇಲ್ಲದಿದ್ದಂತೆಯೂ ಅನುಭವವಾಯಿತು. ಅಂದು ಅಲ್ಲಿ ಮಾತನಾಡಿದ ಯಾರ ಮಾತೂ ನನ್ನನ್ನು ತಲುಪಲಿಲ್ಲ. ಗುರೂಜಿಯವರು ಒಂದು ಪಾರದರ್ಶಕವಾದ ಬೆಳಕಾಗಿದ್ದರು. ಅವರೂ ಕೂಡಾ ಹಾಲ್‌ನಲ್ಲಿ ಇದ್ದಂತೆ ಮತ್ತು ಇಲ್ಲದಿರುವಂತೆ ನನಗನಿಸಿತು. ಅದು ಒಂದು ವಿಪರ್ಯಾಸ.

–ಪ್ರಗತಿ ರಾಜ್

ಮಹರ್ಷಿ ಅಮರರ ಜನ್ಮದಿನದಂದು ನನಗೆ ಮಧ್ಯಾಹ್ನ, ಅನಿರೀಕ್ಷಿತವಾಗಿ ಮುಂಜಾವಿನ ವಾತಾವರಣದಂತೆ ಅನುಭವವಾಯಿತು. ಆಗ ಅಲ್ಲಿದ್ದ ಚೈತನ್ಯಗಳು, ಮುಂಜಾವಿನ ಚೈತನ್ಯಗಳಾಗಿದ್ದವು. ಅದರ ತುಂಬಾ, ಪ್ರೀತಿಯೇ ತುಂಬಿತ್ತು. ನಾನು ಆ ಚೈತನ್ಯಗಳನ್ನು ಪಡೆದು ಸುತ್ತ ಹರಡಿದೆ. ಸ್ವಲ್ಪ ಸಮಯದ ನಂತರ, ಧ್ಯಾನ ಸಭಾಂಗಣ ಆ ಚೈತನ್ಯಗಳಿಂದ ತುಂಬಿದಂತೆ ನನಗನಿಸಿತು. ಅದು ಒಂದು ಹಿತಕರ ಅನುಭವವಾಗಿತ್ತು. ಅವು ಹೊಸಯುಗದ ಚೈತನ್ಯಗಳಾಗಿದ್ದು, ಹೊಸಯುಗದ ಆರಂಭವನ್ನು ಸೂಚಿಸುತ್ತಿದ್ದವು.

–ಕಿರಣ್ಮಯಿ

ನನ್ನ ಛಾಯಾಪುರುಷ, ಒಂದು ಎತ್ತರವಾದ ಸ್ಥಳದಲ್ಲಿ ಕುಳಿತು ನನಗೆ ತರಬೇತಿ ಕೊಡುತ್ತಿದ್ದರು. ಆಕೆ ಮಮತೆ, ತೇಜಸ್ಸು ಮತ್ತು ವಿಸ್ಮಯಕರ ನಾಯಕತ್ವದ ಲಕ್ಷಣಗಳಿಂದ ಕೂಡಿದ್ದರು. ಆಕೆ ಕಟ್ಟುನಿಟ್ಟಾಗಿ, ಕೇಂದ್ರೀಕೃತಳಾಗಿ, ಬಹಳ ಶಿಸ್ತಿನಿಂದ ಕೂಡಿದ್ದರು. ಛಾಯಾಪುರುಷ ನನ್ನನ್ನು ಪ್ರವೇಶಿಸುವ ಮೊದಲು, ಅವರು ತಮ್ಮ ಬೆಳಕನ್ನು ನನಗೆ ಕಳುಹಿಸಿದರು. ಈಗ ನನ್ನ ದೇಹ ಮತ್ತು ಮನಸ್ಸುಗಳೆರಡೂ ಹಗುರವಾಗಿ, ನನಗೆ ಶಾಂತ, ಸ್ವಚ್ಛ ಮತ್ತು ಶೂನ್ಯದ ಅನುಭವವಾಗುತ್ತಿದೆ. ಇದರಿಂದ ನನ್ನ ಸಾಧನೆಯ ದಾರಿ ಸಂಪೂರ್ಣವಾಗಿ ಸ್ಪಷ್ಟವಾಗಿದೆ. ಈ ದಾರಿ ನಂಬಿಕೆ ಮತ್ತು ನಿಸ್ವಾರ್ಥತೆಯ ತಳಹದಿಯ ಮೇಲೆ ನಿಂತಿದೆ. ಇಷ್ಟು ಒಳ್ಳೆಯ ಮನೋಭಾವ ಮತ್ತು ಆತ್ಮವಿಶ್ವಾಸವನ್ನು ಈವರೆಗೆ ನಾನು ಅನುಭವಿಸಿರಲಿಲ್ಲ.

–ವಿದ್ಯಾ ವಿಶ್ವಾಮಿತ್ರ

ಆ ಕ್ಷಣಕ್ಕೆ ನನ್ನನ್ನು ಸಮರ್ಪಿಸಿಕೊಂಡು ಮಾಡಿದ ಧ್ಯಾನ ಬಹಳ ಆನಂದದಾಯಕವಾಗಿತ್ತು. ನಾನು ನನ್ನ ಅಂತರಾಳಕ್ಕೆ ಹೋಗಿ, ಗುರೂಜಿಯವರು ಯಾವಾಗಲೂ ಹೇಳುವ ಶೂನ್ಯತೆಯನ್ನು ಅನುಭವಿಸಿದೆ. ಚೈತನ್ಯಗಳು ಸ್ಫೋಟಗೊಂಡು ಎಲ್ಲಾ ಕಡೆಗಳಿಂದ ಬಂದು ನನ್ನನ್ನು ಸೇರಿ, ನನ್ನನ್ನು ಮತ್ತಷ್ಟು ಆಳಕ್ಕೆ ತೆಗೆದುಕೊಂಡು ಹೋದ ಅನುಭವವಾಯಿತು. ಅಲ್ಲಿ ನಾನು ವಿಸ್ತರಿಸಿದಂತೆ ಅನಿಸಿತು.

–ನೇಹಾ ರಾಜನಾಲ

16 ಫೆಬ್ರವರಿಯಂದು ನಾನು ಧ್ಯಾನಮಾಡಲು ಆರಂಭಿಸಿದಾಗ ಅನೇಕ ಯೋಚನೆಗಳಿಂದ ತೊಂದರೆಯುಂಟಾಯಿತು. ಆಗ ಗುರೂಜಿಯವರೊಡನೆ ಸಂಪರ್ಕ ಕಲ್ಪಿಸಿಕೊಳ್ಳಲು ಪ್ರಯತ್ನಿಸಿದೆ. ತಕ್ಷಣ ನಾನು ನನ್ನನ್ನು ಒಂದು ಪ್ರಕಾಶಮಾನವಾದ ಬಿಳಿಯ ಬೆಳಕಿನ ನಡುವೆ ಕಂಡೆ ಮತ್ತು ಶಾಂತತೆಯ ಅಲೆಗಳು ಬಂದು ನನ್ನನ್ನು ಸೇರಿ ಯೋಚನೆಗಳೆಲ್ಲ ಮಾಯವಾದವು. ಆಗ ನನಗೆ ಹೊರಗಿನ ಪ್ರಪಂಚದ ಅರಿವೂ ಕೂಡಾ ಇರಲಿಲ್ಲ. ನಾನು 15 ನಿಮಿಷಗಳವರೆಗೆ ಅದೇ ಸ್ಥಿತಿಯಲ್ಲಿ ಇದ್ದೆ ಮತ್ತು ಅದರಿಂದ ಹೊರಬರಲು ಮನಸ್ಸಾಗಲಿಲ್ಲ.

–ಚಾರುಶೀಲಾ ಬಿರಾಜ್‌ದಾರ್

ಕೆಲವು ದಿನಗಳ ಹಿಂದೆ ನನ್ನ ಜೀವನದಲ್ಲಿ ಬಂದ ಸಂಕಷ್ಟಗಳಿಂದಾಗಿ ನಾನು ಬಹಳ ಖಿನ್ನನಾಗಿದ್ದೆ. ಅದರಿಂದ ಹೊರಬರಲು ಧ್ಯಾನ ಮಾಡುತ್ತಿದ್ದಾಗ ನನ್ನನ್ನು ಒಂದು ಪ್ರಕಾಶಮಾನವಾದ ಬೆಳಕು ಬಂದು ಸೇರಿತು. ಆ ಬೆಳಕಿಗೆ ನನ್ನ ಪರಿಸ್ಥಿತಿಯನ್ನು ವಿವರಿಸಿದೆ. ತಕ್ಷಣ ನನಗೆ ಅದರಿಂದ ಮುಕ್ತಿ ದೊರಕಿತು. ಈಗ ನಾನು ಸಕಾರಾತ್ಮಕವಾಗಿ, ನಿರಾತಂಕವಾಗಿ, ಪ್ರೇರೇಪಿತನಾಗಿ, ಮಾನಸಿಕವಾಗಿ ದೃಢವಾಗಿದ್ದೇನೆ. ಗುರೂಜಿಯವರಿಗೆ ನನ್ನ ಹೃತ್ಪೂರ್ವಕ ನಮನಗಳು.

–ಸಂದೀಪ್ ಪಾಲ್ಕೆ

ಹೃದಯದ ತೊಂದರೆಯಿಂದ ಬಳಲುತ್ತಿದ್ದ ನನ್ನ ಸ್ನೇಹಿತರೊಬ್ಬರಿಗೆ ಹೀಲಿಂಗ್ ಚೈತನ್ಯವನ್ನು ಕಳುಹಿಸುತ್ತಿದ್ದೆ. ನಾನು ಅವರ ಪತ್ನಿಗೆ ನಿಮ್ಮ ಪರಿಶುದ್ಧವಾದ ಉದ್ದೇಶವನ್ನು ಬೆಳಕಿನ ಮುಂದೆ ಇಟ್ಟು, ನಿಮ್ಮ ಪತಿಯವರಲ್ಲಿ ಒಂದು ದೈವಿಕ ಬೆಳಕನ್ನು ಕಾಣಲು ಪ್ರಯತ್ನಿಸಲು ತಿಳಿಸಿದಾಗ, ಆಕೆ ಹಾಗೆಯೇ ಮಾಡಿದರು. ನಂತರ ವೈದ್ಯರು ಅವರನ್ನು ಒಳಗೆ ಕರೆದು TV ಪರದೆಯನ್ನು ತೋರಿಸುತ್ತಾ, "ಅವರ ರಕ್ತನಾಳದಲ್ಲಿ ಯಾವುದೇ ಅಡೆತಡೆಗಳಿಲ್ಲ. ಹಾಗೂ ಇದೊಂದು ರೀತಿಯ ಪವಾಡವೇ ಸರಿ" ಎಂದು ತಿಳಿಸಿದರು. ಈ ಘಟನೆಯ ನಂತರ ಆಕೆಗೆ ಬೆಳಕಿನಲ್ಲಿ ಸಂಪೂರ್ಣ ನಂಬಿಕೆ ಬಂದು, ಈಗ ಆಕೆ ಲೈಟ್ ಚಾನಲ್ ಮಾಡಲು ಬಯಸಿದ್ದಾರೆ.

–ಹಿಲ್ಲಾ ಮಝ್‌ದಾ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ